# Akashvani : Bangalore
# National Bulletin In Kannada
# 12.10.2024 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಗೆ ನೊಂದಣಿ ಇಂದು ಆರಂಭ

೨. ದೇಶದ ರಕ್ಷಣೆ ಹಾಗೂ ಅಭಿವೃದ್ಧಿಗೆ ಒತ್ತಾಸೆ ನೀಡುವ ೭೫ ಗಡಿ ಮೂಲಸೌಕರ್ಯ ಯೋಜನೆ; ರಕ್ಷಣಾ ಸಚಿವ ರಾಜನಾಥ್ ಸಿಂಗ್ ಲೋಕಾರ್ಪಣೆ

೩. ದೇಶಾದ್ಯಂತ ಇಂದು ವಿಜಯದಶಮಿ ಸಡಗರ-ಸಂಭ್ರಮ; ವಿಜೃಂಭಣೆಯಿಂದ ಸಾಗಿದ ಐತಿಹಾಸಿಕ ಮೈಸೂರು ದಸರಾ ಜಂಬೂ ಸವಾರಿ

೪. ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್; ಸೆಮಿ ಫೈನಲ್ಸ್ ಪ್ರವೇಶಿಸಿದ ಭಾರತದ ಐಹಿಕಾ - ಸುತೀರ್ಥಾ ಜೋಡಿ

<><*<><>*><>

ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಯ ನೊಂದಣಿ ಪ್ರಕ್ರಿಯೆಗೆ ಇಂದು ಚಾಲನೆ ನೀಡಲಾಗಿದೆ. ಈ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಲಾದಂತಹ ಈ ಯೋಜನೆಯಡಿ ಯುವಜನತೆಗೆ ನೈಜ ವ್ಯಾಪರ ಪರಿಸರದ ಅನುಭವ ಒದಗಿಸುವ ನಿಟ್ಟಿನಲ್ಲಿ ೧೨ ತಿಂಗಳ ಪ್ರಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಯೋಜನೆಯಡಿ ೨೧ ರಿಂದ ೨೪ ವರ್ಷ ವಯೋಮಾನದ ೧ ಕೋಟಿ ಯುವ ಅಭ್ಯರ್ಥಿಗಳಿಗೆ ದೇಶದ ಪ್ರಮುಖ ೫೦೦ ಕಂಪನಿಗಳಲ್ಲಿ ಮುಂದಿನ ೫ ವರ್ಷಗಳಲ್ಲಿ ಪ್ರಶಿಕ್ಷಣ ಒದಗಿಸಲು ಉದ್ದೇಶಿಸಲಾಗಿದೆ. ಈ ಪೋರ್ಟಲ್‌ನಲ್ಲಿ ಇದುವರೆಗೆ ೧೯೩ ಕಂಪನಿಗಳು ಸುಮಾರು ೯೧ ಸಾವಿರ ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸಿವೆ. ಸರ್ಕಾರ ಪ್ರಸಕ್ತ ಹಣಕಾಸು ವರ್ಷ ಒಟ್ಟು ೧.೨೫ ಲಕ್ಷ ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸುವ ಗುರಿ ಹಮ್ಮಿಕೊಂಡಿದೆ. ಆನ್‌ಲೈನ್ ಪೋರ್ಟಲ್ pminternship.mca.gov.in. ಮೂಲಕ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇದೇ ತಿಂಗಳ ೨೫ರವರೆಗೆ ನೊಂದಣಿಗೆ ಅವಕಾಶವಿದೆ. ಪ್ರಶಿಕ್ಷಣಾರ್ಥಿ ಪ್ರತಿ ತಿಂಗಳು ೫ ಸಾವಿರ ರೂಪಾಯಿ ಹಣಕಾಸು ನೆರವು ಪಡೆಯಲಿದ್ದು, ಇದರೊಂದಿಗೆ ೬ ಸಾವಿರ ರೂಪಾಯಿಯ ಒಂದು ಬಾರಿ ಅನುದಾನಕ್ಕೂ ಅರ್ಹರಾಗಿರುತ್ತಾರೆ. ದೇಶದ ೩೬ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ೭೩೭ ಜಿಲ್ಲೆಗಳಲ್ಲಿ ಪ್ರಶಿಕ್ಷಣಕ್ಕೆ ಅವಕಾಶವಿರುತ್ತದೆ. ತೈಲ, ಅನಿಲ, ಇಂಧನ, ಪ್ರವಾಸ, ಆಟೋಮೋಟಿವ್, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳಲ್ಲಿಯೂ ಪ್ರಶಿಕ್ಷಣ ಒದಗಿಸಲಾಗುತ್ತದೆ. ಈ ಪ್ರಾಯೋಗಿಕ ಯೋಜನೆಯ ಅಂದಾಜು ವೆಚ್ಚ ೮೦೦ ಕೋಟಿ ರೂಪಾಯಿಗಳಾಗಿವೆ.

<><*<><>*><>

ದೇಶದ ರಕ್ಷಣೆ ಹಾಗೂ ಅಭಿವೃದ್ಧಿಗೆ ಒತ್ತಾಸೆ ನೀಡುವ ೭೫ ಗಡಿ ಮೂಲಸೌಕರ್ಯ ಯೋಜನೆಗಳನ್ನು ಇಂದು ಲೋಕಾರ್ಪಣೆ ಮಾಡಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಗಡಿ ರಸ್ತೆ ಸಂಸ್ಥೆ, ೨ ಸಾವಿರದ ೨೩೬ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ ಗಡಿ ಮೂಲಸೌಕರ್ಯಗಳನ್ನು ವರ್ಚುವಲ್ ಮೂಲಕ ಉದ್ಘಾಟನೆ ಮಾಡಿದರು. ಅಂಡಮಾನ್-ನಿಕೋಬಾರ್ ಸೇರಿದಂತೆ ೧೧ ಗಡಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಗಳನ್ನು ನಿರ್ಮಿಸಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ೨೦೧೪ ರಲ್ಲಿ ಅಧಿಕಾರಕ್ಕೆ ಬಂದ ಎನ್‌ಡಿಎ ಸರ್ಕಾರ, ಈಶಾನ್ಯ ರಾಜ್ಯಗಳು ಹಾಗೂ ಗಡಿ ರಾಜ್ಯಗಳಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ಒತ್ತು ನೀಡಿದೆ. ಈ ಪ್ರದೇಶಗಳಲ್ಲಿ ರಕ್ಷಣೆಯೊಂದಿಗೆ ಅಭಿವೃದ್ಧಿಗೂ ಒತ್ತು ನೀಡಲಾಗಿದೆ ಎಂದು ಹೇಳಿದರು. ರಕ್ಷಣಾ ಸಚಿವರು ಇಂದು ಲೋಕಾರ್ಪಣೆ ಮಾಡಿದ ಮೂಲಸೌಕರ್ಯಗಳಲ್ಲಿ ೨೨ ರಸ್ತೆಗಳು, ೫೧ ಸೇತುವೆ ಹಾಗೂ ಕಿರು ಯೋಜನೆಗಳು ಸೇರಿವೆ. ಇದರಲ್ಲಿ ಜಮ್ಮು-ಕಾಶ್ಮೀರದಲ್ಲಿ ೧೯, ಲಡಾಖ್‌ನಲ್ಲಿ ೧೧, ಅರುಣಾಚಲ ಪ್ರದೇಶದಲ್ಲಿ ೧೮, ಉತ್ತರಾಖಂಡ್‌ನಲ್ಲಿ ೯, ಸಿಕ್ಕಿಂನಲ್ಲಿ ೬, ಹಿಮಾಚಲಪ್ರದೇಶದಲ್ಲಿ ೫, ಪಶ್ಚಿಮ ಬಂಗಾಳ ಹಾಗೂ ರಾಜಸ್ಥಾನಗಳಲ್ಲಿ ತಲಾ ೨ ಹಾಗೂ ನಾಗಾಲ್ಯಾಂಡ್ ಮತ್ತು ಮಿಜೋರಾಮ್‌ನ ೧ ಮೂಲಸೌಕರ್ಯ ಕಾಮಗಾರಿ ಒಳಗೊಂಡಿವೆ.

<><*<><>*><>

ಹರಿಯಾಣದ ನೂತನ ಸರ್ಕಾರದ ಪ್ರಮಾಣವಚನ ಗುರುವಾರ ಪಂಚಕುಲಾದಲ್ಲಿ ನಡೆಯಲಿದೆ. ಹರಿಯಾಣದ ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಕತ್ತರ್, ಇಂದು ಈ ವಿಷಯ ತಿಳಿಸಿದ್ದಾರೆ. ಒಟ್ಟು ೯೦ ಸ್ಥಾನಗಳನ್ನು ಹೊಂದಿರುವ ಹರಿಯಾಣ ವಿಧಾನಸಭೆಯ ಚುನಾವಣೆಯಲ್ಲಿ ಬಿಜೆಪಿ ೪೮ ಸ್ಥಾನಗಳನ್ನು, ಕಾಂಗ್ರೆಸ್ ೩೭ ಸ್ಥಾನಗಳನ್ನು ಗಳಿಸಿವೆ.

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಅಲ್ಜೀರಿಯಾ, ಮಾರಿಟಾನಿಯಾ, ಮಾಲವಿ ದೇಶಗಳಿಗೆ ನಾಳೆಯಿಂದ ಒಂದು ವಾರ ಕಾಲ ಪ್ರವಾಸ ಕೈಗೊಳ್ಳಲಿದ್ದಾರೆ. ಭಾರತದ ರಾಷ್ಟ್ರಪತಿ ಒಬ್ಬರು ಈ ಮೂರು ಆಫ್ರಿಕನ್ ದೇಶಗಳಿಗೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ಬಭಾರತ ತನ್ನ ಜಿ-೨೦ ಅಧ್ಯಕ್ಷತೆಯ ಸಂದರ್ಭದಲ್ಲಿ ಆಫ್ರಿಕನ್ ಸಮುದಾಯಗಳನ್ನು ಶಾಶ್ವತ ಸದಸ್ಯ ರಾಷ್ಟ್ರಗಳನ್ನಾಗಿ ಮಾಡಿದ ಒಂದು ವರ್ಷದಲ್ಲೇ ರಾಷ್ಟ್ರಪತಿಯವರು ಈ ಐತಿಹಾಸಿಕ ಭೇಟಿ, ನೀಡುತ್ತಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಅಲ್ಜೀರಿಯಾದಲ್ಲಿ ಅಲ್ಲಿನ ಅಧ್ಯಕ್ಷರಾದ ಅಬ್ದೆಲ್‌ಮೊಜಿದ್ ಟೆಬೊನೆ ಅವರೊಂದಿಗೆ

ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಇದಲ್ಲದೆ, ಸಿದಿ ಅಬ್ದೆಲ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಹಾಗೂ ಭಾರತ-ಅಲ್ಜೀರಿಯಾ ಆರ್ಥಿಕ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರಪತಿ ಅವರು, ತಮ್ಮ ಪ್ರವಾಸದ ಎರಡನೇ ಚರಣದಲ್ಲಿ ೧೬ನೇ ತಾರೀಖಿನಂದು  ಮಾರಿಟಾನಿಯಾ ಅಧ್ಯಕ್ಷ ಮೊಹಮದ್ ಔಲದ್ ಶೇಖ್ ಎಲ್ ಘೊಜವಾನಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.  ಮಾರಿಟಾನಿಯಾ ಆಫ್ರಿಕನ್ ಸಮುದಾಯದ ಅಧ್ಯಕ್ಷತೆ ಹೊಂದಿರುವ ಈ ಸಂದರ್ಭದಲ್ಲಿ ರಾಷ್ಟ್ರಪತಿ ಅವರು ನೀಡುತ್ತಿರುವ ಭೇಟಿ ಮಹತ್ವದೆನಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ೧೭ ರಿಂದ ೧೯ರವರೆಗೆ ಮಾಲವಿ ದೇಶಕ್ಕೆ ಭೇಟಿ ನೀಡಲಿದ್ದು, ವ್ಯಾಪಾರ, ವಾಣಿಜ್ಯ ಕ್ಷೇತ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಇದಲ್ಲದೆ, ಭಾರತ ಸಮುದಾಯದವರೊಂದಿಗೂ ಸಂವಾದ ನಡೆಸಲಿದ್ದಾರೆ. ರಾಷ್ಟ್ರಪತಿಯವರ ಈ ಭೇಟಿ ಆಫ್ರಿಕನ್ ದೇಶಗಳ ನಡುವೆ ಭಾರತದ ಸಂಬಂಧವನ್ನು ಬಲಪಡಿಸುವ ಉದ್ದೇಶ ಹೊಂದಿದೆ ಎಂದು ನಮ್ಮ ಪ್ರತಿನಿಧಿ ವರದಿ ಮಾಡಿದ್ದಾರೆ.

**<><*<><>*><>**

ದೇಶಾದ್ಯಂತ ಇಂದು ವಿಜಯದಶಮಿ ಹಬ್ಬವನ್ನು ಸಡಗರ ಸಂಭ್ರಮಗಳಿಂದ ಆಚರಿಸಲಾಗುತ್ತಿದೆ. ದುಷ್ಟಶಕ್ತಿಗಳ ವಿರುದ್ಧ ಶಿಷ್ಟ ಶಕ್ತಿಗಳ ಗೆಲುವನ್ನು ಪ್ರತಿಬಿಂಬಿಸುವ ಈ ಹಬ್ಬದ ಆಚರಣೆ ದೇಶದ ವಿವಿಧ ಭಾಗಗಳಲ್ಲಿ ವಿವಿಧ ಸಂಪ್ರದಾಯಗಳಲ್ಲಿ ನಡೆದಿದೆ. ಈ ನಡುವೆ ದೆಹಲಿಯ ಲಾಲ್‌ಕಿಲಾ ಮೈದಾನದಲ್ಲಿ ನಡೆದ ದಸರಾ ಸಂಭ್ರಮಾಚರಣೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗವಹಿಸಿದ್ದರು. ದುಷ್ಟಶಕ್ತಿಗಳ ವಿರುದ್ಧ ಶಿಷ್ಟಶಕ್ತಿಗಳ ಗೆಲುವು ಸಾರುವ ರಾವಣಸುರ, ಕುಂಬಕರ್ಣ ಹಾಗೂ ಮೇಘನಾದ್ ಪ್ರತಿಕೃತಿ ದಹನ ಕಾರ್ಯಕ್ರಮದ ವೀಕ್ಷಣೆಯನ್ನು ಅವರು ಮಾಡಿದರು. ಕರ್ನಾಟಕದಾದ್ಯಂತ ವಿವಿಧ ಶಕ್ತಿ ದೇಗುಲಗಳಲ್ಲಿ ಸಾಂಪ್ರದಾಯಿಕ ಉಪಾಸನೆ ಉತ್ಸವ ನಡೆದಿದೆ. ವಿಶ್ವ ವಿಖ್ಯಾತ ಮೈಸೂರು ದಸರಾ ಮೆರವಣಿಗೆ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗುತ್ತಿದೆ. ಆನೆ ಅಭಿಮನ್ಯು ಹೊತ್ತ ಸುಮಾರು ೭೫೦ ಕೆಜಿ ತೂಕದ ಚಿನ್ನದ ಅಂಬಾರಿ ಮೇಲೆ ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿ ಮೆರವಣಿಗೆ ನಡೆದಿದೆ.  ಸಾಂಸ್ಕೃತಿಕ ಪರಂಪರೆಯನ್ನು ಸಾರುವ ವಿವಿಧ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಭಾಗಿಯಾಗಿವೆ. ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಗೋಣಿಕೊಪ್ಪಲುವಿನಲ್ಲಿ ಶೋಭಾ ಯಾತ್ರೆ ವ್ಯವಸ್ಥೆಯಾಗಿದೆ. ಶೃಂಗೇರಿ, ಕಟಿಲು, ಶ್ರೀದುರ್ಗಾ ಪರಮೇಶ್ವರಿ ದೇವಸ್ಥಾನ, ಮೊದಲಾದ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಬನ್ನಿ ಪರಸ್ಪರ ವಿತರಣೆ ನಡೆಯುತ್ತಿವೆ. ದುರ್ಗಾ ದೇವಿ ಉಪಾಸನೆ ನಂತರ ವಿಸರ್ಜನೆಗೆ ಅವಕಾಶ ಕಲ್ಪಿಸಲು ಬಿಹಾರದಾದ್ಯಂತ ಕೃತಕ ಕೊಳಗಳನ್ನು ನಿರ್ಮಿಸಲಾಗಿದೆ. ಪರಸ್ಪರರು ಶುಭಾಶಯ ಹಂಚಿಕೊಳ್ಳುವ ಶುಭ ವಿಜಯ್ ಹಾಗೂ ವಿಜಯ ಮಿಲನ್ ಕಾರ್ಯಕ್ರಮಗಳನ್ನೂ ಕೂಡ ವ್ಯವಸ್ಥೆ ಮಾಡಲಾಗಿದೆ.

**<><*<><>*><>**

ಲೋಕಾಸಭಾಧ್ಯಕ್ಷ ಓಂ ಬಿರ್ಲಾ, ನೇತೃತ್ವದ ಸಂಸದೀಯ ನಿಯೋಗ, ಜಿನೆವಾದಲ್ಲಿ ನಡೆಯುವ ಅಂತರ ಸಂಸದೀಯ ಸಂಘಟನೆಯ ೧೪೯ನೇ ಸಭೆಯಲ್ಲಿ ಪಾಲ್ಗೊಳ್ಳಲಿವೆ.  ಈ ಅಧಿವೇಶನ ನಾಳೆ ಆರಂಭವಾಗಲಿದ್ದು, ಇದೇ ಗುರುವಾರದವರೆಗೆ ನಡೆಯಲಿದೆ. ಶಾಂತಿ ಹಾಗೂ ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರಗಳ ಸಹಯೋಗ ಕುರಿತಂತೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅಧಿವೇಶನನದಲ್ಲಿ ಭಾಷಣ ಮಾಡಲಿದ್ದಾರೆ. ಇದಲ್ಲದೆ ಅವರು, ಅಂತರ ಸಂಸದೀಯ ಸಂಘಟನೆಯ ಆಡಳಿತ ಮಂಡಳಿ ಸಭೆಯಲ್ಲಿಯೂ ಪಾಲ್ಗೊಳ್ಳಲಿದ್ದಾರೆ. ಹಾಗೂ ಸೋಮವಾರ ಜಿನೆವಾದಲ್ಲಿರುವ ಭಾರತೀಯ ಸಮುದಾಯವರನ್ನು ಭೇಟಿ ಮಾಡಲಿದ್ದಾರೆ. ರಾಜ್ಯಸಭೆ ಉಪ ಸಭಾಪತಿ ಹರಿವಂಶ್ ಸಿಂಗ್ ಕೂಡ ನಿಯೋಗದಲ್ಲಿದ್ದಾರೆ. ಅಂತರ ಸಂಸದೀಯ ಸಂಘಟನೆ ಒಟ್ಟು ೧೮೦ ಸಂಸತ್ ಸದಸ್ಯರನ್ನು ಹಾಗೂ ೧೫ ಸಹ ಸದಸ್ಯರನ್ನು ಹೊಂದಿದೆ. ಚೀನಾ, ಭಾರತ, ಇಂಡೋನೇಷಿಯಾಗಳಂತಹ ದೊಡ್ಡ ದೇಶಗಳಲ್ಲದೇ ಕಾಬೊ, ವರ್ಡೆ, ಸ್ಯಾನ್ ಮ್ಯಾರಿನೊ ಮತ್ತು ಪಲವುಗಳಂತಹ ಚಿಕ್ಕ ದೇಶಗಳ ಸಂಸದರನ್ನೊಳಗೊಂಡಿದೆ.

**<><*<><>*><>**

ಚೆನ್ನೈ ವಿಭಾಗದ ಪೊನ್ನೇರಿ-ಕವರೈ ಪಟ್ಟೆ ರೈಲು ಮಾರ್ಗದ ಪುನಸ್ಥಾಪನೆ ಕಾರ್ಯ ಭರದಿಂದ ಸಾಗಿದೆ. ಕೇಂದ್ರ ಎನ್‌ಡಿಆರ್‌ಎಫ್ ತಂಡದ ನೆರವಿನಿಂದ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ.  ಈ ಮಧ್ಯೆ ರೈಲು ಅಪಘಾತ ಸಂಭವಿಸಿದ ಕವರೈಪೆಟ್ಟೆ ಸ್ಥಳಕ್ಕೆ ರೈಲ್ವೆ ಸುರಕ್ಷಿತಾ ಆಯುಕ್ತ ಎ.ಎಮ್.ಚೌಧರಿ, ಇಂದು ಭೇಟಿ ನೀಡಿ ಸ್ಥಾಯಿ ಪರಿವೀಕ್ಷಣೆ ನಡೆಸಿದರು.

**<><*<><>*><>**

ಯುವ ಜನತೆಯನ್ನು ಸಶಸ್ತ್ರ ಪಡೆಗೆ ಆಕರ್ಷಿಸುವ ನಿಟ್ಟಿನಲ್ಲಿ ಆಯೋಜಿಸಲಾಗಿರುವ 'ವಾಯು ವೀರ್ ವಿಜೇತ' ಕಾರು ರ್‍ಯಾಲಿಗೆ ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಇಂದು ಚಾಲನೆ ನೀಡಿದರು. ೫೦ಕ್ಕೂ ಹೆಚ್ಚು ವಾಯು ವೀರರು ಲಡಾಖ್‌ನಿಂದ ಅರುಣಾಚಲ ಪ್ರದೇಶದವರೆಗಿನ ಒಟ್ಟಾರೆ ೭ ಸಾವಿರ ಕಿಲೋಮೀಟರ್ ಉದ್ದದ ಮಾರ್ಗದಲ್ಲಿ ಯುವ ಜನತೆಗೆ ಭಾರತೀಯ ವಾಯಪಡೆಯ ಐತಿಹಾಸಿಕ ಸಾಧನೆಗಳನ್ನು ತಿಳಿಸಲಿದ್ದಾರೆ.

**<><*<><>*><>**

ಭಾರತದ ಐಹಿಕಾ ಮುಖರ್ಜಿ ಮತ್ತು ಸುತೀರ್ಥಾ ಮುಖರ್ಜಿ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನ ಸೆಮಿ ಫೈನಲ್ಸ್ ಪ್ರವೇಶಿಸಿದ್ದಾರೆ. ಇಂದು ನಡೆದ ಪಂದ್ಯದಲ್ಲಿ ಭಾರತದ ಈ ಜೋಡಿ, ದಕ್ಷಿಣ ಕೊರಿಯಾದ ಕಿಮ್ ನಯೊಂಗ್ ಮತ್ತು ಲೀ ಯುನ್‌ಹೆ ಅವರನ್ನು ೩-೦ ಅಂತರದಿಂದ ಪರಾಭವಗೊಳಿಸಿದರು. ನಾಳೆ ನಡೆಯಲಿರುವ ಸೆಮಿಫೈನಲ್ಸ್ ಪಂದ್ಯದಲ್ಲಿ ಐಹಿಕಾ ಮತ್ತು ಸುತೀರ್ಥಾ ಜೋಡಿ, ಜಪಾನಿನ ಮಿವಾ ಹರಿಮೊತೊ ಮತ್ತು ಮಿಯೂ ಕಿಹರಾ ತಂಡವನ್ನು ಎದುರಿಸಲಿದೆ. ಪುರುಷರ ಸಿಂಗಲ್ಸ್‌ನಲ್ಲಿ ಮಾನುಷ್ ಶಾ ಮತ್ತು ಮಾನವ್ ಠಕ್ಕರ್ ೧೬ನೇ ಸುತ್ತನ್ನು ಪ್ರವೇಶಿಸಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**